ರಾಮನಗರ ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾ ಕಛೇರಿಗಳು ಪೂರ್ಣಗೊಳ್ಳದಿರುವುದು

960 (1271) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ರಚನೆಯಾದ ರಾಮನಗರ ಜಿಲ್ಲಾ ಕೇಂದ್ರದಲ್ಲಿ ವಿವಿಧ ಜಿಲ್ಲಾ ಕಚೇರಿಗಳ ಸಂಕೀರ್ಣ ಸ್ಥಾಪನೆಗೆ ಯಾವಾಗ ಸರ್ಕಾರದಿಂದ ಆದೇಶ ಹೊರಡಿಸಲಾಯಿತು; ಪ್ರತಿ ಕಛೇರಿಯ ಅಂದಾಜು ಮೊತ್ತವೆಷ್ಟು; ಹಾಗೂ ಪ್ರತಿ ಕಛೇರಿಯ ನಿರ್ಮಾಣದ ಅವಧಿ ಹಾಗೂ ರೂಪುರೇಷೆಗಳೇನು;

ಆ) ಪ್ರಸ್ತುತ ಪ್ರತಿ ಕಛೇರಿ ನಿರ್ಮಾಣ ಯಾವ ಹಂತದಲ್ಲಿದೆ; ವಾರ್ಷಿಕವಾರು ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ. ಇನ್ನೂ ಎಷ್ಟೆಷ್ಟು ಹಣ ಬಾಕಿ ಇದೆ. (ಸಂಪೂರ್ಣ ವಿವರ ನೀಡುವುದು);

ಇ) ಇನ್ನು ಎಷ್ಟು ದಿನದಲ್ಲಿ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು; ಹಾಗೂ ಜಿಲ್ಲಾ ಕಚೇರಿಗಳ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೊಸದಾಗಿ ರಚನೆಯಾದ ರಾಮನಗರ ಜಿಲ್ಲಾ ಕೇಂದ್ರದಲ್ಲಿ ವಿವಿಧ ಜಿಲ್ಲಾ ಕಚೇರಿಗಳ ಸಂಕೀರ್ಣ ಸ್ಥಾಪನೆಗೆ ಸರ್ಕಾರಿ ಆದೇಶ ಸಂಖ್ಯೆ: ಲೋಇ 35 ಬಿಜಿಎಂ 2007, ದಿ: 15.5.2007 ರಲ್ಲಿ ಕಂದಾಯ ಭವನ, ಪಂಚಾಯತ್‌ರಾಜ್ ಭವನ ಮತ್ತು ಪೊಲೀಸ್ ಭವನ ಸಂಕೀರ್ಣ ಕಟ್ಟಡ ನಿರ್ಮಾಣಕ್ಕೆ ಆದೇಶ ಹೊರಡಿಸಲಾಗಿದೆ.

ಕಂದಾಯ ಭವನ ಸಂಕೀರ್ಣ	1300.00 ಲಕ್ಷಗಳು
ಪಂಚಾಯತ್ ರಾಜ್ ಭವನ ಸಂಕೀರ್ಣ	1415.00 ಲಕ್ಷಗಳು
ಪೊಲೀಸ್ ಭವನ ಸಂಕೀರ್ಣ	585.00 ಲಕ್ಷಗಳು

ಸದರಿ ಭವನಗಳ ನಿರ್ಮಾಣದ ಕೆಲಸವನ್ನು ಪೂರ್ಣಗೊಳಿಸಲು ಭ ದಿನಾಂಕದಂದು 12 ತಿಂಗಳ ಕಾಲಾವಧಿ ನೀಡಲಾಗಿತ್ತು. ಾಲವು ಸೇರಿ)

ಆ) ಕಂದಾಯ ಭವನ ಸಂಕೀರ್ಣ, ಪಂಚಾಯತ್‌ರಾಜ್ ಸಂಕೀರ್ಣ ಭವನ ಹಾಗೂ ಪೋಲೀಸ್ ಭವನ ಸಂಕೀರ್ಣ ಕಾಮಗಾರಿಗಳ ಗ್ರಾನೈಟ್ ನೆಲಹಾಸು ನೀರು ಸರಬರಾಜು, ನೈರ್ಮಲ್ಯೀಕರಣ ಹಾಗೂ ವಿದ್ಯುತ್ತೀಕರಣ ಬಾಗಿಲು, ಕಿಟಕಿ ಅಳವಡಿಸುವುದು ಸ್ಟ್ರಕ್ಚರಲ್ ಗ್ಲೆಜಿಂಗ್ ಕಾಮಗಾರಿಗಳು ಕೆಲಸ ಪ್ರಗತಿಯಲ್ಲಿದ್ದು, ಜುಲೈ 2010 ಅಂತ್ಯಕ್ಕೆ ಕಟ್ಟಡಗಳ ಸಂಕೀರ್ಣಗಳನ್ನು ಪೂರ್ಣಗೊಳಿಸಲಾಗುವುದು.

ವಾರ್ಷಿಕವಾರು ಬಿಡುಗಡೆಯಾಗಿರುವ ಹಣ

ವರ್ಷ	ಕಂದಾಯ ಭವನ, ಪಂಚಾಯತ್‌ರಾಜ್ ಭವನ ಮತ್ತು ಪೊಲೀಸ್ ಭವನ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಮೊತ್ತ ಲಕ್ಷಗಳಲ್ಲಿ	ಬಿಡುಗಡೆ ಮಾಡಬೇಕಾದ ಬಾಕಿ ಮೊತ್ತ (ಲಕ್ಷಗಳಲ್ಲಿ)
2006–07	0.00	---
2007–08	793.00	---
2008–09	1228.00	---
2009–10 (ಫೆಬ್ರವರಿ ಅಂತ್ಯಕ್ಕೆ)	1068	---
2010 ಮಾರ್ಚ್ ಅಂತ್ಯಕ್ಕೆ	---	400.00

ಇ) ಅನುದಾನದ ಲಭ್ಯತೆಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಲಾಗುವುದು. ಕಂದಾಯ ಭವನ, ಪಂಚಾಯತ್‌ರಾಜ್ ಭವನ ಮತ್ತು ಪೋಲೀಸ್ ಭವನ ಕಾಮಗಾರಿಗಳನ್ನು ಜುಲೈ 2010 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.